**Garden City College**
Bangalore – 560 049.

10.06.2022

As per the notification of Bangalore University, this is to inform all the students who have studied in Garden City College of Science and Management Studies that Bangalore University is providing one time measure opportunity for students who studied from 2004-05 batch and onward to clear their pending subjects during November/December 2022 for 1, 3, 5 & 7 semesters (Odd sem) and May/June 2023 for 2, 4, 6 & 8 semesters (Even sem).

Interested students may send their details to pro@gardencity.university, latest by 30th July 2022. For more details please contact 9243750069.

10/6/2022

**Principal**

Principal
Garden City College of
Science and Management Studies
Bangalore 49

# ಬೆಂಗಳೂರು ವಿಶ್ವವಿದ್ಯಾಲಯ

ಜ್ಞಾನಭಾರತಿ, ಬೆಂಗಳೂರು-560056

ವಿಷಯ: 2004-05ನೇ ಶೈಕ್ಷಣಿಕ ಸಾಲಿನಿಂದ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ: 1. ವಿ.ವಿ. ಆದೇಶ ಸಂ. Aca-II/Extension 1 year/UG/2016-17 Batch/2022 ದಿನಾಂಕ 03/02/2022
2. ದಿನಾಂಕ: 21.04.2022ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ನಡಾವಳಿಗಳು
3. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 25.05.2022

*****

**ಪ್ರಸ್ತಾವನೆ:**

2016-17ನೇ ಸಾಲಿನಲ್ಲಿ ವಿವಿಧ ಸ್ನಾತಕ ಪದವಿಗಳಿಗೆ (Under-graduate) ಪ್ರವೇಶಾತಿ ಪಡೆದು, ಪದವಿಯನ್ನು ಮುಗಿಸಲು ನಿಗದಿಪಡಿಸಿರುವ ನಿರ್ದಿಷ್ಟ ಕಾಲಮಿತಿ ಮೀರಿರುವ ವಿದ್ಯಾರ್ಥಿಗಳಿಗೆ ಹೆಚ್ಚುವರಿಯಾಗಿ ಒಂದು ವರ್ಷ ಪರೀಕ್ಷೆಯನ್ನು ತೆಗೆದುಕೊಳ್ಳಲು ಉಲ್ಲೇಖ (1)ರ ವಿಶ್ವವಿದ್ಯಾಲಯದ ಆದೇಶವನ್ನು ಹೊರಡಿಸಲಾಗಿತ್ತು.

ದಿನಾಂಕ: 21.04.2022ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಸಭೆಯಲ್ಲಿ ಸದರಿ ವಿಷಯವನ್ನು ಅನುಸಮರ್ಥಿಸಲಾಯಿತು. ಸದರಿ ವಿಷಯವನ್ನು ಚರ್ಚಿಸುವ ಸಂದರ್ಭದಲ್ಲಿ 2016-17ನೇ ಸಾಲಿಗಿಂತ ಹಿಂದಿನ ವರ್ಷಗಳಲ್ಲಿ ವಿವಿಧ ಪದವಿ ಕೋರ್ಸಿಗೆ ಪ್ರವೇಶ ಪಡೆದು ಪರೀಕ್ಷೆಗಳಲ್ಲಿ ಇನ್ನೂ ಉತ್ತೀರ್ಣರಾಗದ ಸಾವಿರಾರು ವಿದ್ಯಾರ್ಥಿಗಳು/ಅವರ ಪೋಷಕರು ಪ್ರತಿ ದಿನ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ ಪರೀಕ್ಷೆಗಳನ್ನು ಬರೆಯಲು ಅವಕಾಶ ಕಲ್ಪಿಸುವಂತೆ ಮನವಿ ಮಾಡುತ್ತಲೇ ಇದ್ದರು ಹಾಗೂ ದಿನೇ ದಿನೇ ಇಂತಹವರುಗಳ ಸಂಖ್ಯೆ ಹೆಚ್ಚುತ್ತಲೇ ಇತ್ತು. **ಈಗಾಗಲೇ ನೂತನ ರಾಷ್ಟ್ರೀಯ ಶಿಕ್ಷಣ ನೀತಿ (NEP-2020) ಅನುಸಾರ 2021-22ನೇ ಶೈಕ್ಷಣಿಕ ಸಾಲಿನಿಂದ ನವೀನ ಪಠ್ಯಕ್ರಮಗಳು ಜಾರಿಯಲ್ಲಿರುವುದರಿಂದ ಹಳೆಯ ವಿದ್ಯಾರ್ಥಿಗಳು ಪದವಿ ಮುಗಿಸಿಕೊಳ್ಳಲು ಅನುವು ಮಾಡಿಕೊಡುವ ವಿಷಯವನ್ನು ಸಹ ಸಭೆಯು ಗಮನಿಸಿತು.** ಸುಧೀರ್ಘ ಚರ್ಚೆಯ ನಂತರ, ವಿದ್ಯಾರ್ಥಿಗಳ ಉದ್ಯೋಗ ಮತ್ತು ಅವರ ಭವಿಷ್ಯದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು 2004-05 ಮತ್ತು ಮುಂದಿನ ಶೈಕ್ಷಣಿಕ ಸಾಲುಗಳಲ್ಲಿ ವಿವಿಧ ಪದವಿಗಳಿಗೆ ಪ್ರವೇಶಾತಿ ಪಡೆದು ಇಲ್ಲಿಯವರೆಗೂ ಪದವಿಗಳನ್ನು ಮುಗಿಸಿಕೊಳ್ಳಲು ಸಾಧ್ಯವಾಗದ ಅನುತ್ತೀರ್ಣ ವಿದ್ಯಾರ್ಥಿಗಳಿಗೆ ಒಂದು ಬಾರಿಯ ಕ್ರಮವಾಗಿ ಪರೀಕ್ಷೆಗಳನ್ನು ಬರೆಯಲು ಅನುಮತಿ ನೀಡಲು ವಿದ್ಯಾವಿಷಯಕ ಪರಿಷತ್ ಸಭೆಯು ನಿರ್ಣಯಿಸಿತು.

ಆದ್ದರಿಂದ ಈ ಆದೇಶ:

**ವಿಶ್ವವಿದ್ಯಾಲಯದ ಆದೇಶ ಸಂಖ್ಯೆ. ಎಸಿಎ-2/ಹೆಚ್ಚುವರಿ ಪರೀಕ್ಷೆ/ಅನುಮತಿ/2022-23 ದಿನಾಂಕ: 26.05.2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ದಿನಾಂಕ: 21.04.2022ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ನಿರ್ಣಯದನುಸಾರ, 2004-05ನೇ ಶೈಕ್ಷಣಿಕ ಸಾಲಿನಿಂದ (ಸೆಮಿಸ್ಟರ್ ಪದ್ಧತಿ ಜಾರಿಯಾದ ವರ್ಷ) ಮತ್ತು ತದನಂತರದ ಶೈಕ್ಷಣಿಕ ಸಾಲುಗಳಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಅಧ್ಯಯನ ವಿಭಾಗಗಳು ಮತ್ತು ಸಂಯೋಜಿತ (affiliated) /ಸ್ವಾಯತ್ತ (autonomous) ಕಾಲೇಜುಗಳಲ್ಲಿ ವಿವಿಧ ಪದವಿಗಳು, ಸ್ನಾತಕೋತ್ತರ ಪದವಿಗಳು, ಬಿ.ಎಡ್./ಬಿ.ಪಿ.ಇ.ಡಿ. ಕೋರ್ಸುಗಳಿಗೆ ಪ್ರವೇಶ ಪಡೆದು ಪದವಿಗಳನ್ನು ಮುಗಿಸಲು ನಿಗದಿಪಡಿಸಿ ನಿರ್ದಿಷ್ಟಪಡಿಸಿರುವ ಕಾಲಮಿತಿಯನ್ನು ಮೀರಿ ಇನ್ನೂ ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ (ವಿಶ್ವವಿದ್ಯಾಲಯದ ಅಂಚೆ ತೆರಪು ಮತ್ತು ದೂರ ಶಿಕ್ಷಣದ ವಿದ್ಯಾರ್ಥಿಗಳನ್ನೂ ಒಳಗೊಂಡಂತೆ) 2022-23ನೇ ಶೈಕ್ಷಣಿಕ ವರ್ಷದಲ್ಲಿ ನಡೆಯಲಿರುವ ಅಂದರೆ ನವೆಂಬರ್/ಡಿಸೆಂಬರ್ 2022ರಲ್ಲಿ 1,3,5 ಮತ್ತು 7ನೇ ಸೆಮಿಸ್ಟರ್ (Odd Semesters) ಪರೀಕ್ಷೆಗಳನ್ನು ಹಾಗೂ ಮೇ/ಜೂನ್ 2023ರಲ್ಲಿ 2,4,6 ಮತ್ತು 8ನೇ ಸೆಮಿಸ್ಟರ್ (Even Semesters) ಪರೀಕ್ಷೆಗಳನ್ನು ಬರೆಯಲು ಅವಕಾಶ ನೀಡಿ ಈ ಮೂಲಕ ಆದೇಶಿಸಲಾಗಿದೆ.

..2-

10/6/2022

2021-22ನೇ ಶೈಕ್ಷಣಿಕ ಸಾಲಿನಿಂದ ನೂತನ ರಾಷ್ಟ್ರೀಯ ಶಿಕ್ಷಣ ನೀತಿ (NEP-2020) ಅನುಸಾರ ನವೀನ ಪಠ್ಯಕ್ರಮಗಳು ಜಾರಿಯಲ್ಲಿರುವುದರಿಂದ ಹಳೆಯ ವಿದ್ಯಾರ್ಥಿಗಳು ಪರೀಕ್ಷೆಗಳನ್ನು ತೆಗೆದುಕೊಂಡು, ಪದವಿ ಮುಗಿಸಿಕೊಳ್ಳಲು ಅನುವು ಮಾಡಿಕೊಡುವ ಸಮರ್ಥನೆಯೊಂದಿಗೆ ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ Guidelines on Determination of a Uniform Span Period within which a Student may be allowed to Qualify for a Degree ಮಾರ್ಗಸೂಚಿಯನ್ನು ಗಮನದಲ್ಲಿಟ್ಟುಕೊಂಡು ಮುಖ್ಯವಾಗಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಈ ಆದೇಶವನ್ನು ಹೊರಡಿಸಲಾಗಿದೆ.

2004-05ನೇ ಶೈಕ್ಷಣಿಕ ಸಾಲಿನಿಂದ ತದನಂತರ ಸಾಲುಗಳಲ್ಲಿ ವಿವಿಧ ವಿಷಯಗಳಲ್ಲಿ ಅನುತ್ತೀರ್ಣರಾದ ಹಳೆಯ ವಿದ್ಯಾರ್ಥಿಗಳು ಪರೀಕ್ಷೆಗಳನ್ನು ತೆಗೆದುಕೊಳ್ಳಲು ಯಾವ ಪಠ್ಯಕ್ರಮಗಳನ್ನು (Syllabus) ಅಭ್ಯಸಿಸಬೇಕು, ಆಂತರಿಕ ಅಂಕಗಳ ಸಮೀಕರಣ/ಸರಾಸರಿಗೊಳಿಸುವ ನಿರ್ಧರಿಸುವಿಕೆ, ವಿಷಯಗಳ ಸಮನಾಂತರಗಳನ್ನು (Equivalence) ಗುರುತಿಸುವಿಕೆ ಮತ್ತು ಇತರ ಪ್ರಮುಖ ವಿಷಯಗಳ ಕುರಿತು ಸ್ಪಷ್ಟ ರೂಪುರೇಷೆಗಳನ್ನು ಸಿದ್ಧಪಡಿಸಿ ಅಧಿಸೂಚನೆಯನ್ನು ಆದ್ಯತೆಯ ಮೇಲೆ ಹೊರಡಿಸಲು ಕುಲಸಚಿವರು (ಮೌಲ್ಯಮಾಪನ) ರವರಿಗೆ ಅಧಿಕರಿಸಿದೆ.

ಪ್ರಸ್ತುತ, ಬೆಂಗಳೂರು ನಗರ ವಿಶ್ವವಿದ್ಯಾಲಯ ಮತ್ತು ಬೆಂಗಳೂರು ಉತ್ತರ ವಿಶ್ವವಿದ್ಯಾಲಯಗಳ ಅಧೀನದಲ್ಲಿ ಬರುವ, 2017-18ನೇ ಶೈಕ್ಷಣಿಕ ಸಾಲಿನವರೆಗೆ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡಿದ್ದ ಕಾಲೇಜುಗಳ ಪ್ರಾಂಶುಪಾಲರುಗಳು ತಮ್ಮ ಕಾಲೇಜುಗಳಲ್ಲಿ ಅನುತ್ತೀರ್ಣರಾದ ಎಲ್ಲಾ ಹಳೆಯ ವಿದ್ಯಾರ್ಥಿಗಳಿಗೆ ಪ್ರಸ್ತಾಪಿತ ಹೆಚ್ಚುವರಿ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅನುವಾಗಲು ಈ ಆದೇಶದ ಬಗ್ಗೆ ವ್ಯಾಪಕವಾಗಿ ಪ್ರಚಾರ ನೀಡಲು ಕೋರಲಾಗಿದೆ. ಮುಂದುವರೆದು, ಸದರಿ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಇಚ್ಛಿಸುವ ಅನುತ್ತೀರ್ಣಗೊಂಡ ಹಳೆಯ ವಿದ್ಯಾರ್ಥಿಗಳ ಪಟ್ಟಿಯನ್ನು ದೃಢೀಕರಿಸಿ ಕುಲಸಚಿವರು (ಮೌ)ರವರಿಗೆ ಸಕಾಲದಲ್ಲಿ ಸಲ್ಲಿಸಲು ಸೂಚಿಸಲಾಗಿದೆ.

ಆದೇಶಾನುಸಾರ,

ಕುಲಸಚಿವರು

ಗೆ,

1. ಬೆಂಗಳೂರು ವಿಶ್ವವಿದ್ಯಾಲಯದ ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರು, ಬೆಂ.ವಿ.ವಿ.
2. ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡಿರುವ/ಸ್ವಾಯತ್ತ (autonomous) ಮಾನ್ಯತೆ ಹೊಂದಿದ್ದ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಹಾಗೂ 2017-18ನೇ ಶೈಕ್ಷಣಿಕ ಸಾಲಿನವರೆಗೆ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡಿದ್ದು ಪ್ರಸ್ತುತ ಬೆಂಗಳೂರು ನಗರ ಮತ್ತು ಬೆಂಗಳೂರು ಉತ್ತರ ವಿಶ್ವವಿದ್ಯಾಲಯಗಳಿಗೆ ಸಂಯೋಜನೆಗೊಂಡಿರುವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

ಪ್ರತಿಗಳು:

1. ಕುಲಸಚಿವರು (ಮೌಲ್ಯಮಾಪನ) ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು- **ಸೂಕ್ತ ಕ್ರಮಕ್ಕೆ.**
2. ಸಿಸ್ಟಂ ಅನಾಲಿಸ್ಟ್, E-Governance ಕೋಶ - ಅಧಿಸೂಚನೆಯನ್ನು ವಿ.ವಿ. ಅಂತರ್ಜಾಲದಲ್ಲಿ ಪ್ರಕಟಿಸುವ ಸಲುವಾಗಿ
3. ಕುಲಪತಿಯವರು/ಕುಲಸಚಿವರು/ ಕುಲಸಚಿವರು (ಮೌಲ್ಯಮಾಪನ)/ವಿತ್ತಾಧಿಕಾರಿಯವರು-ಇವರುಗಳ ಆಪ್ತಕಾರ್ಯದರ್ಶಿಗಳಿಗೆ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
4. ಕಛೇರಿ/ಹೆಚ್ಚುವರಿ ಪ್ರತಿಗಳು.

---

10/6/2022